ಅನುರಾಧಾ ರಾವ್ ನಾಡಿಗ್

# ಮಳೆ ಹನಿಗಳ ಹಾಡು–ಜಾಡು

ಮಳೆ ತರುವ ಆನಂದ ಒಂದೆರಡು ರೀತಿಯದಲ್ಲ. ಬಾಲ್ಯದಿಂದ ಮುಪ್ಪಿನ ವರೆಗೆ ಜೊತೆಯಾಗಿರುವ ಮಳೆ ಗೆಳೆಯನಂತೆ, ತಾಯಿಯಂತೆ, ನಲ್ಲೆಯಂತೆ. ಅದು ಪ್ರೀತಿ–ವಿರಹ, ನೋವು, ಸುಖದ ಭಾವಗಳ ಸಮೂಹ. ಮಳೆ ಮೋಹದ, ದಾಹದ ಮುಗ್ಧ ಮನಸ್ಸೊಂದರ ಲಹರಿ ಇಲ್ಲಿದೆ...



ಮೂರಕ್ಕೆ ಬಂದಿದ್ದು ಮೂವತ್ತಕ್ಕೆ ಅನ್ನೊ ಗಾದೆ ನನ್ನ ವಿಚಾರದಲ್ಲಿ ಮೂವತ್ತು ದಾಟಿ ಮತ್ತೊಂದು ದಶಕ ಕಳೆದರೂ ಅಕ್ಷರಶಃ ಸತ್ಯ! ಅಷ್ಟಲ್ಲದೆ ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಅಂತಾರೆಯೇ?

ಇಷ್ಟು ವರ್ಷಗಳು ಕಳೆದರೂ ನನ್ನ ಈ ಹುಚ್ಚು ಕಮ್ಮಿ ಆಗಿಲ್ಲ ನೋಡಿ! ಇನ್ನೂ ಜಾಸ್ತಿ ಆಗುವ ಲಕ್ಷಣಗಳೇ ಕಾಣಿಸ್ತಾ ಇವೆ!

ಅದು ಏನು ಗೊತ್ತೆ? ಮಳೆಯ ಹುಚ್ಚು!

ನಾನು ಇನ್ನೂ ಆಗ ತಾನೆ ನಡೆಯೋದಕ್ಕೆ ಶುರು ಮಾಡಿದ್ದೆ. ಅಂತ ಪುಟ್ಟಮಗೂನ ಮನೆಯವರೆಲ್ಲ 'ಜಲಪಿಶಾಚಿ' ಅಂತ ಕರೀತಾ ಇದ್ದಿದ್ದಕ್ಕೆ ನನ್ನ ಈ ಹುಚ್ಚೇ ಕಾರಣ! ಹೌದು... ನೀರಿನ ಹುಚ್ಚು. ಮನೆಯಲ್ಲಿ ನೀರಿನ ಶಬ್ದ ಎಲ್ಲೇ ಕೇಳಲಿ, 'ಅಯ್ಯೋ! ಇದು ಅನು ಕೆಲ್ಸಾನೇ ಇರ್ಬೇಕು! ಏನು ಮಾಡೋದಪ್ಪ ಈ ಮಗೂಗೆ?!' ಅಂತ ಮನೆಯವರ ನಿದ್ದೆಗೆಡಿಸಿದ್ದ ಖ್ಯಾತಿ ನನ್ನದು!

ವರ್ಷಗಳು ಕಳೆಯುತ್ತಿದ್ದಂತೆ ಸಹಜವಾಗಿಯೇ ಈ ನನ್ನ ಹುಚ್ಚು ನೀರಿನ ಮೂಲರೂಪವಾದ ಮಳೆಯ ಗೀಳಿಗೆ ಮುನ್ನುಡಿ ಬರೆಯಿತು. ವರ್ಷದ ಎಲ್ಲಾ ಕಾಲ, ಋತುಗಳೂ ಒಂದಿಲ್ಲೊಂದು ರೀತಿಯಲ್ಲಿ ಪ್ರಿಯವಾಗಿದ್ದರೂ ಮಳೆಗಾಲ ನನಗೆ ಅಚ್ಚುಮೆಚ್ಚು.

ಹುಯ್ಯೋಹುಯ್ಯೋ ಮಳೆರಾಯ ಬಾಳೆತೋಟಕೆ ನೀರಿಲ್ಲ ಎಂದು ಆನಂದದಿಂದ ರಾಗವಾಗಿ ಹಾಡುತ್ತಿದ್ದ ಮೈಸೂರಿನ ಶ್ರೀವಾಣಿವಿದ್ಯಾಮಂದಿರ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆಯ ಮಕ್ಕಳಾದ ನಮಗೆ ಏಳನೇ ತರಗತಿಗೆ ಬಂದು ಅಲ್ಪಸ್ವಲ್ಪ ಇಂಗ್ಲಿಷ್ ಅರ್ಥವಾಗತೊಡಗಿದ ಮೇಲೆ, ಸಮೀಪದ ಆಂಗ್ಲಶಾಲೆಯ ಮಕ್ಕಳು 'ರೇನ್ ರೇನ್ ಗೋ ಅವೇ... ಲಿಟಲ್ ಜಾನಿ ವಾಂಟ್ಸ್ ಟು ಪ್ಲೇ' ಎಂದು ಯಾಂತ್ರಿಕವಾಗಿ ಹೇಳುತ್ತಿದ್ದರೆ ವಿಚಿತ್ರ ಎನ್ನಿಸಿ ನಗು ಬರುತ್ತಿತ್ತು.